# ವಾರ್ಡ್ ಸಭೆ ಸಂಖ್ಯೆ.27

ದಿನಾಂಕ:.05.02.2022 ರಂದು ಸಮಯ 11:00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರ ಅಧ್ಯಕ್ಷತೆಯಲ್ಲಿ ಕರೆಯಲಾಗಿತ್ತು.

<u>ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು</u>

1. ಶ್ರೀ ಎಲ್ ವೆಂಕಟೇಶ್ ನೋಡಲ್ ಅಧಿಕಾರಿ ರವರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಅಧ್ಯಕ್ಷರು)
2. ಶ್ರೀ ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ. (ಕಾರ್ಯದರ್ಶಿ)
3. ಶ್ರೀ ಜಯಪಾಲ್ ಸದಸ್ಯರು.
4. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
5. ಶ್ರೀ ರಾಜೇಶ್ ಸದಸ್ಯರು.
6. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
7. ಶ್ರೀ ಪ್ರದೀಪ್‌ಕುಮಾರ್ ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
8. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ), ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
9. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು (ಬೆಸ್ಕಾಂ) ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
10. ಶ್ರೀ ನಿಂಗರಾಜ ಎನ್ ಕಂದಾಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
11. ಶ್ರೀ ಮಲ್ಲಯ್ಯ ಅರಣ್ಯಾ ಸಂರಕ್ಷಣಾ ಇಲಾಖೆವತಿಯಿಂದ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.
12. ಆರ್.ಎಂ.ಸಿ ಯಾರ್ಡ್ ಪೋಲೀಸ್ ಠಾಣೆಯ ಅಧಿಕಾರಿ.
13. ಶ್ರೀ ದರ್ಶನ್ ಎಂ.ಬಿ, ಗಣಕಯಂತ್ರ ನಿರ್ವಾಹಕರು, ಶಂಕರನಗರ ಪ್ರಾಥಮಿಕ ಆರೋಗ್ಯ ಕೇಂದ್ರ.
14. ಶ್ರೀ ಮಂಜು ಸಿ ಮಾರ್ಷಲ್ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

| ಕ್ರ.ಸಂ | ವಿವರಣೆ | ಕ್ರಮ |
|---|---|---|
| 1. | ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಓದಿ ತಿಳಿಸಿದರು. | – |
| 2. | ಕಾರ್ಯದರ್ಶಿಗಳು ಸಾರ್ವಜನಿಕರ ಸಮಸ್ಯೆಗಳಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಯನ್ನು ತಿಳಿಸುವಂತೆ ಸಾರ್ವಜನಿಕರನ್ನು ಕೋರಿದರು. | – |
| 3. | ಸಾರ್ವಜನಿಕರು ಶಂಕರನಗರ ಮುಖ್ಯ ರಸ್ತೆ, ಮನೆ ನಂ.146, ಮನೆ ಮೇಲೆ ಮರದ ರೆಂಬೆಗಳನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಅರಣ್ಯ ಇಲಾಖೆ ರವರೆಗೆ ರೆಂಬೆಗಳನ್ನು ತೆರವುಗೊಳಿಸಲು ಸೂಚಿಸಿದರು. | ಅರಣ್ಯ ಸಂರಕ್ಷಣಾ ಇಲಾಖೆ |
| 4. | ಸಾರ್ವಜನಿಕರು ಟೆಂಪಲ್ ಬೆಲ್ ಅಪಾರ್ಟ್‌ಮೆಂಟ್‌ನ ರಸ್ತೆಯಲ್ಲಿ ಬೀದಿ ದೀಪಗಳನ್ನು ರಿಪೇರಿ ಮಾಡಿಸಲು ಕೋರಿದರು. ಕಾರ್ಯದರ್ಶಿಗಳು ಸಂಬಂಧಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಬೀದಿ ದೀಪ ನಿರ್ವಹಣೆ ಇಲಾಖೆ |
| 5. | ಸಾರ್ವಜನಿಕರು ಚುನಾವಣೆ ಗುರುತಿನ ಚೀಟಿಯನ್ನು ಮಾಡಿಸುವ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಶ್ರೀ ನಿಂಗರಾಜು ಕಂದಾಯ ಪರಿವೀಕ್ಷಕರು. ಅಂತರ್ಜಾಲದಲ್ಲಿ ದಾಖಲಿಸಬೇಕು ಎಂದು ತಿಳಿಸಿದರು. | ಕಂದಾಯ ಇಲಾಖೆ |
| 6. | ಸಭೆಯಲ್ಲಿ ಹಾಜರಿದ್ದ ಸದಸ್ಯರು ಹಾಗೂ ಅಧಿಕಾರಿಗಳು ವ್ಯಾಕ್ಸಿನ್ ಬಗ್ಗೆ ಮಾಹಿತಿ ಕೋರಿದರು, ಇದಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಂಕರನಗರದ ಗಣಕಯಂತ್ರ ನಿರ್ವಾಹಕರು ರವರು ಮಾಹಿತಿ ನೀಡಿದರು. | – |
| 7. | ಹಿಂದಿನ ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ವ್ಯಾಪ್ತಿಯಲ್ಲಿ ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವುದರ ಯೋಜನೆಯನ್ನು ನೀಡಲಾಗುವುದು ಎಂದು ತಿಳಿಸಿರುತ್ತೀರಿ ಆದ್ದರಿಂದ ಮಾಹಿತಿಯನ್ನು ನೀಡಿ ಎಂದು ಕೋರಿದರು. ಆದರೆ ಕಿರಿಯ ಆರೋಗ್ಯ ಪರಿವೀಕ್ಷಕರು ಸಭೆಗೆ ಹಾಜರಿರಲಿಲ್ಲ. | ಕಿರಿಯ ಆರೋಗ್ಯ ಪರಿವೀಕ್ಷಕರು |
| 8. | ಕಾರ್ಯದರ್ಶಿಗಳು ರವರು ಗಜಾನನ ಸ್ಲಂ-1 ರಲ್ಲಿ ಚರಂಡಿ ಮಧ್ಯದಲ್ಲಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕೋರಿದರು. ಇದಕ್ಕೆ ಶ್ರೀ ದಿನೇಶ್ ಕುಮಾರ್ ಬೆಸ್ಕಾಂ ಸಹಾಯಕ ಅಭಿಯಂತರರು ಸ್ಥಳಕ್ಕೆ ಬೇಟಿ ನೀಡಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |

Scanned with CamScanner

| | | |
|---|---|---|
| 9. | ಕಾರ್ಯದರ್ಶಿಗಳು ರವರು ಗಜಾನನ ಸ್ಲಂ-2 ರಲ್ಲಿ ಕೇಬಲ್ ಓಪನ್ ಇದೆ ಸರಿಪಡಿಸಲು ಕೋರಿದರು. ಇದಕ್ಕೆ ಶ್ರೀ ದಿನೇಶ್ ಕುಮಾರ್ ಬೆಸ್ಕಾಂ ಸಹಾಯಕ ಅಭಿಯಂತರರು ಸ್ಥಳಕ್ಕೆ ಬೇಟಿ ನೀಡಿ ಪರಿಶೀಲಿಸಲಾಗುವುದು ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |
| 10. | ಶ್ರೀ ರಾಜೇಶ್ ಸದಸ್ಯರು ರವರು ಮಹೇಶ್ ಟಿಂಬರ್ಸ್ ಟಿ.ಸಿ ಹತ್ತಿರ ಇರುವ ಜಿ.ಓ.ಎಸ್ ಅನ್ನು ಸ್ಥಳಾಂತರಿಸಲು ಕೋರಿದರು. ಇದಕ್ಕೆ ಶ್ರೀ ದಿನೇಶ್ ಕುಮಾರ್ ಬೆಸ್ಕಾಂ ಸಹಾಯಕ ಅಭಿಯಂತರರು ಸ್ಥಳಾಂತರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. | ಬೆಸ್ಕಾಂ ಇಲಾಖೆ |
| 11. | ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು ರವರು ರಕ್ಷಾ ಆಸ್ಪತ್ರೆ ಹತ್ತಿರ ಇರುವ ಬ್ಲಾಕ್ ಸ್ಪಾಟ್ ಅನ್ನು ತೆರವುಗೊಳಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಮಾರ್ಷಲ್ ರವರಿಗೆ ಕಸ ಹಾಕುವವರಿಗೆ ದಂಡವಿಧಿಸಲು ಸೂಚಿಸಿದರು. | ಘನತ್ಯಾಜ್ಯ ಇಲಾಖೆ |
| 12. | ಶ್ರೀ ವೆಂಕಟೇಶ್ ವೈ.ಆರ್ ರವರು ಗೋವರ್ದನ್‌ಥಿಯೇಟರ್ ನಿಂದ ಗಜಾನನ ಸ್ಲಂ -1 ಕ್ಕೆ ಹೋಗುವ ರಸ್ತೆಯಲ್ಲಿ ನಿಲ್ಲಿಸುವ ವಾಹನಗಳನ್ನು ತೆರವುಗೊಳಿಸಲು ಕ್ರಮಕೈಗೊಳ್ಳುವಂತೆ ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಯಶವಂತಪುರ ಸಂಚಾರಿ ಪೋಲೀಸ್ ಠಾಣೆ ರವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು. | ಯಶವಂತಪುರ ಸಂಚಾರಿ ಇಲಾಖೆ |
| 13. | ಶ್ರೀ ವೆಂಕಟೇಶ್ ವೈ.ಆರ್ ರವರು ಗಜಾನನ ಸ್ಲಂ-2 ರಲ್ಲಿ 5000 ಸಾವಿರ ಲೀಟರ್ ಸಾಮರ್ಥ್ಯ ರಷ್ಟು ನೀರಿನ ಟ್ಯಾಂಕ್ ನಿರ್ಮಿಸಲು ಕೋರಿದರು. ಇದಕ್ಕೆ ಕಾರ್ಯದರ್ಶಿಗಳು ಮೇಲಾಧಿಕಾರಿಗಳ ಜೊತೆ ಚರ್ಚಿಸಲಾಗುವುದು ಎಂದು ತಿಳಿಸಿದರು. | - |
| 14. | ಶ್ರೀ ರಾಜೇಶ್ ಸದಸ್ಯರು ರವರು ಐ ಮಾಸ್ಟ್ ರೆಪೇರಿ ಬಗ್ಗೆ ಮಾಹಿತಿ ಕೋರಿದರು. ಇದಕ್ಕೆ ಕಾರ್ಯದರ್ಶಿ ರವರು 16 ಐ ಮಾಸ್ಟ್ ರಲ್ಲಿ 1 ಐ ಮಾಸ್ಟ್ ರೆಪೇರಿ ಮಾಡಲಾಗಿರುತ್ತದೆ ಹಾಗೂ ರಿಪೇರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ ಎಂದು ತಿಳಿಸಿದರು. | ಬೀದಿ ದೀಪ ನಿರ್ವಹಣೆ ಇಲಾಖೆ |
| 15. | ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಅಧ್ಯಕ್ಷರು, ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು. | - |

L. Venkatesh 7/2/22

ಅಧ್ಯಕ್ಷರು

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ

Scanned with CamScanner